ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಂಪುಟ (ಕೇಂದ್ರ)

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡ ಪ್ರಭ    ದಿನಾಂಕ : DATE : 13/06/2017

# ನೂತನ ಸಚಿವರಿಗೆ ಮೋದಿ ನೀತಿಪಾಠ

ನವದೆಹಲಿ: ಕಚೇರಿಗೆ ಸರಿಯಾಗಿ ಬೆಳಗ್ಗೆ 9.30ಕ್ಕೆ ಬರಬೇಕು. ಮನೆಯಿಂದ ಕೆಲಸ ಮಾಡುವುದನ್ನು ಆದಷ್ಟು ಕಡಿಮೆ ಮಾಡಿ ಇತರರಿಗೆ ಮಾದರಿಯಾಗಬೇಕು' ಪ್ರಧಾನಿ ನರೇಂದ್ರ ಮೋದಿ ತಮ್ಮ ಸಂಪುಟದ ನೂತನ ಸಚಿವರಿಗೆ ಬೋಧಿಸಿದ ಪಾಠದ ಸಾರಾಂಶವಿದು. ತಮ್ಮ ಸಂಪುಟದ ಸಚಿವರ ಜೊತೆ ಬುಧವಾರ ಮೊದಲ ಸಭೆ ನಡೆಸಿದ ಪ್ರಧಾನಿ ನರೇಂದ್ರ ಮೋದಿ ಅವರು, 'ಕ್ಯಾಬಿನೆಟ್ ಸಚಿವರು ರಾಜ್ಯ ಸಚಿವರ ಜತೆ ಕಡತಗಳ ಬಗ್ಗೆ ಮಾಹಿತಿ ಹಂಚಿಕೊಳ್ಳಬೇಕು. ಸಚಿವರು ಹಾಗೂ ಸಂಸದರ ನಡುವೆ ಹೆಚ್ಚು ವ್ಯತ್ಯಾಸವಿರುವುದಿಲ್ಲ ಎಂದು ಪ್ರಧಾನಿ ಮೋದಿ ಅವರು ಹೇಳಿದರು.

## ತ್ರಿವಳಿ ತಲಾಖ್, ಆಧಾರ್ ಮಸೂದೆಗೆ ಸಂಪುಟ ಅಸ್ತು

ನವದೆಹಲಿ: ತ್ರಿವಳಿ ತಲಾಖ್ ಪದ್ಧತಿ ನಿಷೇಧಿಸುವ ಮಸೂದೆಗೆ ಕೇಂದ್ರ ಸಂಪುಟ ಬುಧವಾರ ಅನುಮೋದನೆ ನೀಡಿದೆ. ಫೆಬ್ರವರಿಯಲ್ಲಿ ಹೊರಡಿಸಿದ ತ್ರಿವಳಿ ತಲಾಖ್ ನಿಷೇಧ ಕುರಿತ ಸುಗ್ರೀವಾಜ್ಞೆಯನ್ನು ಈ ಮಸೂದೆ ಬದಲಿಸಲಿದೆ. ಬ್ಯಾಂಕ್, ಮೊಬೈಲ್ ಸಂಪರ್ಕಕ್ಕೆ ಐಚ್ಛಿಕವಾಗಿ ಆಧಾರ್ ಕಾರ್ಡ್ ನೀಡುವ ಆಧಾರ್ ತಿದ್ದುಪಡಿ ಮಸೂದೆಗೆ ಸಂಪುಟ ಅನುಮೋದನೆ ನೀಡಿದೆ.